

ಮೋಡಗಳ ಊರಿಗೆ ಕರೆದೊಯ್ಯುವಂತಿರುವ ದಾರಿ



ಗಣಿಗಾರಿಕೆಯ ಗಾಯಗಳನ್ನು ಮಾಯಿಸಿರುವ ಹಸಿರು ಮತ್ತು ಗಂಗಾಮಾಯಿ



ಹಾರುತಿರುವ ಮೋಡಗಳೇ...

ಮೋಡಗಳನ್ನು ನೋಡಿದರೆ ಚಲನೆಯೇ ಕ್ಷಣ ಕಾಲ ನಿಶ್ಚಲಗೊಂಡಂತೆ ಅನ್ನಿಸುತ್ತದೆ.

ಸಂಡೂರಿನಲ್ಲಿ ಮೋಡಗಳಿಗೂ ಬೆಟ್ಟಗಳಿಗೂ ಅವಿನಾಭಾವ ಸಂಬಂಧ. ಬೆಟ್ಟಗಳ ಮೇಲೆ ಮೋಡಗಳು ಪ್ರೀತಿಯ ರೂಪದಲ್ಲಿ ಮಳೆ ಸುರಿಸುತ್ತವೆ. ಮೋಡಗಳನ್ನು ಬೆಟ್ಟಗಳು ಆಕರ್ಷಿಸಿದರೆ, ನಮ್ಮನ್ನು ಮೋಡಗಳು ಸೆಳೆಯುತ್ತವೆ.



ಸಂಡೂರಿನ ಮೋಡಗಳು

ಮೋಡಗಳ ಮರೆಯಲ್ಲಿ ನಡೆಯುವ ನೇಸರನ ನೆರಳು ಬೆಳಕಿನ ಆಟ, ಅದರ ಫಲವಾಗಿ ಏಕಕಾಲಕ್ಕೆ ಒಂದೆಡೆ ನೆರಳು, ಮತ್ತೊಂದೆಡೆ ರವಿಯ ಕಿರಣಗಳು ಕಾಡಿನ ಮೇಲೆ ಚೆಲ್ಲುತ್ತದೆ. ಆ ನೆಳಲು ಬೆಳಕಿನಾಟದಲ್ಲಿ ಕಾಡಿನ ಚೆಲುವು ನೂರ್ಮಡಿಗೊಳ್ಳುತ್ತದೆ.

ಕಾರ್ಮೋಡಗಳು ಕರಗಿ ಮಳೆ ಸುರಿಯುವ ದೃಶ್ಯ ನಯನಮನೋಹರ. ಮಳೆಯ ನಂತರ ಭೂಮಿ ತಂಪಾಗಿ, ತಂಗಾಳಿಯ ಲಾಲಿಹಾಡಲ್ಲಿ ಗುಡ್ಡ ಕಾಡುಗಳಲ್ಲಿ ಧನ್ಯತಾಭಾವ ಎದ್ದು ಕಾಣುತ್ತದೆ. ಅಮ್ಮನಿಂದ ಅಭ್ಯಂಜನ ಮಾಡಿಸಿಕೊಂಡ ಮಗುವಿನಂತೆ ಪ್ರಕೃತಿ ಕಂಗೊಳಿಸುತ್ತದೆ. ಪೌಡರ್ ಲೇಪಿಸುವಂತೆ ಬಿಳಿ ಮೋಡಗಳು ಬೆಟ್ಟಗುಡ್ಡಗಳ ಮೇಲೆಲ್ಲ ಹರಡಿಕೊಳ್ಳುತ್ತವೆ. ಹತ್ತಿಯ ಉಂಡೆಗಳು ಬೆಟ್ಟದಿಂದ ಬೆಟ್ಟಕ್ಕೆ ಹಾರುತ್ತಾ ಹೋದಂತೆ ಭಾಸವಾಗುತ್ತದೆ. ಈ ಸೌಂದರ್ಯ ನೋಡಲೆಂದೇ ಕಾಮನಬಿಲ್ಲು ಮೂಡುತ್ತದೆ. ಹೃದಯದ ಕಣ್ಣುಗಳು ತೆರೆದುಕೊಳ್ಳುತ್ತವೆ. ಎಲ್ಲೆಂದರಲ್ಲಿ ಬೆಳ್ಳಿರೇಖೆಗಳಂತೆ ನೀರಝುರಿಗಳು ಮೂಡುತ್ತವೆ.

ಮಳೆ, ಮಂಜು, ತಂಗಾಳಿ... ಸಂಡೂರಿನ ಪ್ರಕೃತಿಗೆ ವಿಶೇಷ ಕಳೆ. ಇಲ್ಲಿನ ಒಟ್ಟು 30561.95 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿಯ ಬೆಟ್ಟಗುಡ್ಡಗಳು ಸಮುದ್ರ ಮಟ್ಟದಿಂದ ಸಾವಿರಾರು ಅಡಿ ಎತ್ತರದಲ್ಲಿವೆ. ರಾಮಘಡ ಅರಣ್ಯ ಪ್ರದೇಶ ಕಲ್ಯಾಣ ಕರ್ನಾಟಕದಲ್ಲೇ ಅತ್ಯಂತ ಎತ್ತರದ ಪ್ರದೇಶ ಎಂಬ ಗರಿಮೆಗೆ ಪಾತ್ರವಾಗಿದೆ.

ತಾಯಮ್ಮನ ಕೊಳ್ಳ ಮೀಸಲು ಅರಣ್ಯ, ತಾರಾನಗರದ ಹಿನ್ನೀರಿನ ಅರಣ್ಯ ಪ್ರದೇಶ, ಗಂಡಿ ಮಾರೆಮ್ಮ ದೇಗುಲದಿಂದ ಹಿಡಿದು ರಾಮಘಡ ಹಿರೆ ಪೊದೆಯವರೆಗೆ ಇರುವ ಅರಣ್ಯ, ಯಶವಂತ ನಗರ ಗೆಸ್ಟ್‌ಹೌಸ್ ಏರಿಯಾ, ದೋಣಿಮಲೈ ಸುತ್ತಮುತ್ತಲಿನ ಅರಣ್ಯ... ಇವುಗಳೆಲ್ಲ ಸಂಡೂರಿನ ಫಾಸಲೆಯಲ್ಲಿರುವ ಪ್ರಾಕೃತಿಕ ಸೌಂದರ್ಯದ ಚೆಲುವಿನ ತಾಣಗಳು.

ಚಾರಣಕ್ಕಿದು ಒಳ್ಳೆಯ ಸಮಯ. ನಸುಕು ಹರಿಯುವ ವೇಳೆಗೆ ಕಾಡಿನ ದಾರಿಯಲ್ಲಿ ನಡೆಯುವುದಂತೂ ಅದ್ಭುತ ಅನುಭವ.

ಚಿತ್ರಗಳು: ಸಂಡೂರು ಸಮಿಟರ್ಸ್ ತಂಡ